4. ಶಾಂತಿಸಾಗರ, ಚೋಳೂರಪಾಳ್ಯದಂತಹ ಜನ ನಿಬಿಡ ಪ್ರದೇಶಗಳಲ್ಲಿ Marshal ಗಳ ಸಹಾಯದಿಂದ ವಾರ್ಡ್ ವ್ಯಾಪ್ತಿಯಲ್ಲಿ Mask ಧರಿಸದ ಸಾರ್ವಜನಿಕರಿಗೆ ಹಾಗೂ ತ್ಯಾಜ್ಯ ಬಿಸಾಡುವ ಸಾರ್ವಜನಿಕರಿಗೆ ದಂಡ ವಿಧಿಸುವುದು ಹಾಗೂ ಸಾರ್ವಜನಿಕರಲ್ಲಿ ಕೋವಿಡ್-19 ಬಗ್ಗೆ ಅರಿವು ಮೂಡಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.
5. ಮರಗಳು ಬಹಳಷ್ಟು ಬೆಳೆದಿರುವುದಾಗಿ, ದೂರು ದಾಖಲಾಗಿರುವುದರಿಂದ ಅರಣ್ಯ ಅಧಿಕಾರಿಯವರಿಗೆ ಲಿಖಿತ ವರದಿ ನೀಡಲು ಸೂಚಿಸಿದರು. ಅದರಂತೆ ಅರಣ್ಯ ಅಧಿಕಾರಿ ಮತ್ತು ಪೋಲಿಸ್ ಅಧಿಕಾರಿ ರವರಿಗೆ ಪತ್ರದ ಮೂಲಕ ವರದಿ ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ಸಭೆಗೆ ತಿಳಿಸಿದರು.
6. ಬೀದಿ ದೀಪಗಳನ್ನು ಸರಿಪಡಿಸಲು ನೋಡಲ್ ಅಧಿಕಾರಿ ರವರ ಸೂಚಿಸಿದರು. ಅದರಂತೆ ಕಾರ್ಯದರ್ಶಿ ಸಂಬಂದಪಟ್ಟ ಅಧಿಕಾರಿ ರವರಿಗೆ ಸೂಚಿಸುವುದಾಗಿ ತಿಳಸಿದರು.
7. OFC Cables ಗಳ ಬಗ್ಗೆ ಚರ್ಚಿಸಲಾಗಿ ವಾರ್ಡ್ ವ್ಯಾಪ್ತಿಯಲ್ಲಿ ಶೇಕಡ 100% ತೆರವುಗೊಳಿಸಿರುವುದಾಗಿ ಕಾರ್ಯದರ್ಶಿಗಳು ನೋಡಲ್ ಅಧಿಕಾರಿ ರವರ ಗಮನಕ್ಕೆ ತಂದರು.
8. ಬೀದಿ ಬದಿ ವ್ಯಾಪಾರಿಗಳು ಆರ್ಥಿಕ ಸವಲತ್ತು ಕೊಡಬೇಕು ಮತ್ತು ಗುರುತಿನ ಚೀಟಿ ವಿತರಣೆ ನೀಡಲಾಗಿದೆಯೇ ಎಂಬುದರ ಬಗ್ಗೆ ಚರ್ಚಿಲಾಯಿತ್ತು. ಅದಕ್ಕೆ ಕಂದಾಯ ಅಧಿಕಾರಿಗಳು ಸರ್ವೆ ನಡೆಸುತ್ತಿರುವುದಾಗಿ ತಿಳಿಸಿದರು
9. ಅಂಗನವಾಡಿಗೆ ಹೋಗದ ಮಕ್ಕಳನ್ನು, ನಿರಾಶಿತರು ಬಗ್ಗೆ ಚರ್ಚಸಲಾಗಿ. ಅದಕ್ಕೆ ಕಂದಾಯ ಅಧಿಕಾರಿಗಳು ಅಂಗನವಾಡಿಗೆ ಹೋಗದ ಮಕ್ಕಳನ್ನು ಸರ್ವೆ ನಡೆಸುತ್ತಿರುವುದಾಗಿ ತಿಳಿಸಿದರು ಹಾಗೂ ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ನಿರಾಶಿತರ ಕೇಂದ್ರ ಇರುವುದಿಲ್ಲವೆಂದು ತಿಳಿಸಿದರು. ಮುಂದುವರೆದಂತೆ ಸರ್ವೆ ಕಾರ್ಯವನ್ನು ದಿ: 21.12.2020 ರಿಂದ ದಿ: 14.02.2021 ರವರೆಗು ಸರ್ವೆ ನಡೆಸಬೇಕೆಂದು ಸುತ್ತೋಲೆ ಬಂದಿರುವುದಾಗಿ ನೋಡಲ್ ಅಧಿಕಾರಿ ರವರ ತಿಳಿಸಿದರು.
10. ಆಶಾ ಕಾರ್ಯಕರ್ತರನ್ನು ಬಳಸಿಕೊಂಡು ಸ್ಲಂಮ್, ಚತ್ರ, ಅಕ್ಕಿಪಿಕ್ಕಿ ಜನಾಂಗದ ಮಕ್ಕಳಿಗೆ 1 ರಿಂದ 14 ವಯಸಿನ ಮಕ್ಕಳಿಗೆ ಉಚಿತ ಶಿಕ್ಷಣದ ಸಂವಿಧಾನದಲ್ಲಿ ಇರುವ ಸವಲತ್ತನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಮನವರಿಕೆ ಅರಿವು ಮೂಡಿಸಲು ನೋಡಲ್ ಅಧಿಕಾರಿ ರವರ ಸೂಚಿಸಿದರು.
11. GT Mall ಕಂದಾಯ ವಸೂಲಾತಿ ಬಗ್ಗೆ ಚರ್ಚಿಸಲಾಗಿ ಕಂದಾಯ ಪಾವತಿಯಾಗಿರುವುದಾಗಿ ಹಾಜರಿದ್ದ ಕಂದಾಯ ಅಧಿಕಾರಿಗಳು ನೋಡಲ್ ಅಧಿಕಾರಿ ರವರಿಗೆ ವಿವರಿಸಿದರು.
12. ಮುಂದಿನ ಸಭೆಯಲ್ಲಿ Police, Traffic Police, ಅರಣ್ಯ ಇಲಾಖೆ ರವರು ಹಾಜರಾಗಿರಲು ಸೂಚಿಸದರು ಹಾಗೂ ಮುಂದಿನ ಸಭೆಯನ್ನು ಬೆಳಗ್ಗೆ: 11.00 ಗಂಟೆಗೆ ನಡೆಸಲು ನೋಡಲ್ ಅಧಿಕಾರಿ ಸೂಚಿಸಿದರು.
13. Manual Scavenger ಬಗ್ಗೆ ಸರ್ವೆ ನಡೆಸಿ ಹಾಗೂ ಆರ್ಥಿಕ ಸವಲತ್ತು ನೀಡಲು ಆರೋಗ್ಯ ಪರಿವೀಕ್ಷಕರು ರವರಿಗೆ ನೋಡಲ್ ಅಧಿಕಾರಿ ರವರು ಸೂಚಿಸಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು. ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

R Sangeetha

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 123 ವಿಜಯನಗರ.

ಅಧ್ಯಕ್ಷರು,
ಹಾಗೂ ನೋಡಲ್ ಅಧಿಕಾರಿಗಳು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ:-123 ವಿಜಯನಗರ ಬೆಂಗಳೂರು.40

ಸಂ:ಸ.ಅ/ವಾರ್ಡ್ ಸಮಿತಿ/ /ಸಭೆ- /20-21

ದಿ:19.12.2020

## ವಿಜಯನಗರ ವಾರ್ಡ್ ಸಂಖ್ಯೆ:-123 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆದೇಶ ಸಂಖ್ಯೆ:ಬಿ12(5) ಪಿ.ಆರ್/35/2020-21 ದಿ:05.12.2020 ರವರ ಆದೇಶದಂತೆ ದಿ:19.12.2020 ರಂದು ವಾರ್ಡ್ ಸಂಖ್ಯೆ:123 ರ ವಿಜಯನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಪದನಾಮ |
|---|---|---|
| 1. | ಶ್ರೀ. ಡಿ.ಕೆ ಬಾಬು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ. |
| 2. | ಶ್ರೀಮತಿ. ಸಂಗೀತ ಆರ್ | ಸದಸ್ಯ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 123. |
| 3. | ಶ್ರೀಮತಿ. ವಿದ್ಯಾ ಹಿರೇಮಠ್ | ಎನ್.ಜಿ.ಓ. |
| 4. | ಶ್ರೀ ಹೇಮಂತ್ ಕುಮಾರ್ | ಸಹಾಯಕ ಆರೋಗ್ಯ ಪರಿವೀಕ್ಷಕರು. |
| 5. | ಶ್ರೀ. ದೊಡ್ಡವೀರಪ್ಪ | ಸಹಾಯಕ ಅಭಿಯಂತರರು ಬೆಸ್ಕಾಂ. |
| 7. | ಶ್ರೀ. ಕುಮಾರ್ | ಕಂದಾಯ ಪರಿವೀಕ್ಷರು. |
| 8. | ಶ್ರೀ. ಸುಮಿತ್ರ ಬಿ. ಎಸ್ | ಕಂದಾಯ ಅಧಿಕಾರಿಗಳು. |
| 9. | ಶ್ರೀ. ಆದಿನಾರಾಯಣ | ಹಿರಿಯ ಆರೋಗ್ಯ ಪರಿವೀಕ್ಷಕರು |

ದಿನಾಂಕ: 19.12.2020 ರಂದು, ಸಮಯ 03.00 ಗಂಟೆಗೆ, ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ.ಡಿ.ಕೆ ಬಾಬು ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ಡಿ.ಕೆ.ಬಾಬು ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ. ಸಂಗೀತ ಆರ್ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

1. ಮನುವನ ಅಡ್ಡರಸ್ತೆಯ ಡಾಂಬರು ಕಾಮಗಾರಿಯ ಬಗ್ಗೆ ಚರ್ಚಿಸಿ, ಗುತ್ತಿಗೆದಾರರಾದ ಶ್ರೀ.ಚಂದ್ರನಾಯ್ಕ ರವರಿಗೆ ಕಾಮಗಾರಿಯನ್ನು ದಿ: 23.12.2020 ರಂದು ಪ್ರಾರಂಭಿಸಲು ಸೂಚಿಸಿರುವುದಾಗಿ ಕಾರ್ಯದರ್ಶಿ ರವರು ನೋಡಲ್ ಅಧಿಕಾರಿ ರವರ ಗಮನಕ್ಕೆ ತಂದರು.
   - Garbage, Solid Waste Management ಬಗ್ಗೆ ನೋಡಲ್ ಅಧಿಕಾರಿ ರವರು ಯಾವುದಾದರು ದೂರುಗಳು ಬಂದಿದೆಯೆ ಎಂದು ವಿಚಾರಿಸಲಾಗಿ ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ದೂರುಗಳು ದಾಖಲಾಗಿರುವುದಿಲ್ಲವೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಸಭೆಗೆ ತಿಳಿಸಿದರು
2. ಮನುವನ ಅಡ್ಡರಸ್ತೆಗಳಲ್ಲಿ Pot hole ಕಾಮಗಾರಿಯು ಪೂರ್ಣಗೊಂಡಿರುವುದಾಗಿ ಕಾರ್ಯದರ್ಶಿ ರವರು ಸಭೆಗೆ ತಿಳಿಸಿದರು.
   - ಉಳಿದಂತೆ ವಿದ್ಯಾರಣ್ಯ ಮುಖ್ಯರಸ್ತೆಯಿಂದ ವಿಶ್ವ ಮೆಡಿಕಲ್ ರ ವರೆಗೆ.
   - ಪ್ರಮೀಳ ಬಾಯಿ ಶಾಲೆ ರಸ್ತೆ.
3. ಮನುವನ, ಚೋಳೂರಪಾಳ್ಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೊಳ್ಳೆಗಳ ಹಾವಳಿ ಹೆಚ್ಚಾಗಿರುವುದಾಗಿ ಸಾರ್ವಜನಿಕರ ದೂರಿಗೆ ಸಂಭಂದಿಸಿದಂತೆ ನಿರಂತರ Chemical Spray ಮಾಡಿಸಲಾಗುತ್ತಿರುವುದಾಗಿ ಸಹಾಯಕ ಆರೋಗ್ಯ ಪರಿವೀಕ್ಷಕರು ರವರು ತಿಳಿಸಿದರು.